
# ಶ್ರೀಚೈತನ್ಯರ ಕೃಷ್ಣಪ್ರೇಮ

ವಿಜಯ ಕುಮಾರ



ಮಾರ್ಚ್ ೯ ಚೈತನ್ಯಮಹಾಪ್ರಭುಗಳ ಹುಟ್ಟುಹಬ್ಬ. ಅವತಾರಪುರುಷರೆಂದು ಪ್ರಸಿದ್ಧರಾಗಿರುವ ಅವರು ಭಾಗವತ ಧರ್ಮಕ್ಕೆ ನವಚೇತನವನ್ನು ನೀಡಿದವರು, ಕುತ್ಸಿತ ತಾಂತ್ರಿಕ ಪದ್ಧತಿಗಳಿಂದ ಕಲುಷಿತವಾಗಿದ್ದ ಧರ್ಮವನ್ನು ಶುದ್ಧ ಭಕ್ತಿಯ ಜಲದಿಂದ ನಿರ್ಮಲಗೊಳಿಸಿದವರು. ಅವರ ಸಂಕ್ಷಿಪ್ತ ಜೀವನಚಿತ್ರವನ್ನು ನೀಡಿರುವ ಶ್ರೀ ವಿಜಯ ಕುಮಾರರು 'ವಿವೇಕಪ್ರಭ' ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವರು.

## ಪಾಂಡಿತ್ಯವೋ ಪ್ರೇಮವೋ?

ನ್ಯಾಯಶಾಸ್ತ್ರದ ಪ್ರಖ್ಯಾತ ಆಚಾರ್ಯರಲ್ಲಿ ಕಲಿಯುತ್ತಿದ್ದ ಇಬ್ಬರು ಸಹಪಾಠಿಗಳು ಗಂಗೆಯ ಮೇಲೆ ದೋಣಿಯಲ್ಲಿ ಹೋಗುತ್ತಿದ್ದರು. ಒಬ್ಬಾತನಿಗೆ ಈ ಶಾಸ್ತ್ರದಲ್ಲಿ ತನ್ನ ಗುರುವನ್ನೂ ಸೇರಿದಂತೆ ಎಲ್ಲರನ್ನೂ ಮೀರಿಸಿ ಪ್ರಕಾಂಡ ಪಂಡಿತನಾಗಿ ಖ್ಯಾತಿಯನ್ನು ಪಡೆಯುವ ಕನಸು. ಆತ ಅದಕ್ಕಾಗಿ ಅಗಾಧವಾದ ಶ್ರಮಪಟ್ಟು ಒಂದು ಪಾಂಡಿತ್ಯಪೂರ್ಣವಾದ ಗ್ರಂಥವನ್ನೇ ರಚಿಸಿದ್ದನು. ಆದರೆ ತನ್ನೊಡನೆ ದೋಣಿಯಲ್ಲಿ ಬರುತ್ತಿರುವ ಸಹಪಾಠಿಯೂ ಸಹ ನ್ಯಾಯಸೂತ್ರಗಳ ಮೇಲೆ ವಿದ್ವತ್ಪೂರ್ಣವಾದ ಕೃತಿಯೊಂದನ್ನು ರಚಿಸಿದ್ದಾನೆಂದು ಕೇಳಿದ್ದನಷ್ಟೆ. ಈಗ ಗಂಗೆಯ ಮೇಲೆ ಹೋಗುತ್ತಿದ್ದಾಗ ಮೊದಲನೆ ಸಹಪಾಠಿಯು ತನ್ನ ಸ್ನೇಹಿತನ ಕೃತಿಯ ಬಗ್ಗೆ ತಿಳಿಯಲು ಇಚ್ಛಿಸಿದನು. ಅದರಿಂದ ಕೆಲವು ಭಾಗಗಳಷ್ಟನ್ನೇ ಓದುತ್ತಿದ್ದಂತೆ, ಪ್ರಕಾಂಡಪಂಡಿತನಾಗಬೇಕೆಂದು ಬಯಸಿದ್ದ ಆತನ ಕನಸು ನುಚ್ಚುನೂರಾಯಿತು. ಕಾರಣವಿಷ್ಟೆ, ಆ ಎರಡನೆಯ ಸಹಪಾಠಿ ಅಷ್ಟೇನೂ ಪ್ರಾಶಸ್ತ್ಯವನ್ನು ಕೊಡದಿದ್ದ ಆ ಕೃತಿ ಬರೀ ಪಾಂಡಿತ್ಯದ ಗ್ರಂಥವಾಗಿರಲಿಲ್ಲ, ವಿನೂತನವಾದ ಒಳನೋಟಗಳನ್ನೊಳಗೊಂಡಿತ್ತು. ಸರಿ, ತನ್ನ ಕನಸುಗಳು, ಬಯಕೆಗಳೆಲ್ಲ ಸತ್ತಾಗ ಆದ ನೋವಿನಿಂದ ಮೊದಲನೆಯ ಸಹಪಾಠಿ ಅಳಲು ಮೊದಲು ಮಾಡಿದನು. ಅವನ ಸ್ನೇಹಿತನಿಗೆ ಕಾರಣ ತಿಳಿಯದಾಯಿತು. ನಂತರ ಕಾರಣ ಕೇಳಿದಾಗ, 'ನ್ಯಾಯಶಾಸ್ತ್ರದ ಇತಿಹಾಸದಲ್ಲಿ ಮೊಟ್ಟಮೊದಲನೇ ಸ್ಥಾನ ನನ್ನ ಗ್ರಂಥಕ್ಕೆ ಲಭಿಸುತ್ತದೆಂದು ತಿಳಿದಿದ್ದೆ. ಆದರೆ ನಿನ್ನದು ಕೃತಿರತ್ನ. ಇನ್ನು ನನಗೆ ಆ ಭರವಸೆಯಿಲ್ಲ' ಎಂದನು. ಅವನ ಸ್ನೇಹಿತನಾದರೊ, 'ಇಷ್ಟೇನೇ, ಅದಕ್ಕಾಗಿ ಚಿಂತೆ ಏಕೆ?' ಎಂದು ಹೇಳುತ್ತಾ ತನ್ನ ವಿದ್ವತ್ಪೂರ್ಣವಾದ ಕೃತಿಯನ್ನು ಗಂಗೆಗೆ ಎಸೆದನು. ಈ ರೀತಿ ಎಸೆದವನೇ ಮುಂದೆ ಚೈತನ್ಯಮಹಾಪ್ರಭು ಎಂದು ಪ್ರಸಿದ್ಧನಾದ ನಿಮಾಯ್.

ಹೀಗಾಗಿ ನ್ಯಾಯಶಾಸ್ತ್ರದಮೇಲಿನ ಅತ್ಯಂತ ಮಹತ್ವಪೂರ್ಣವಾದ ಕೃತಿರತ್ನವೊಂದು ಗಂಗೆಯ ಪಾಲಾಯಿತು. ಪ್ರಕಾಂಡ ಪಂಡಿತನಾಗಬೇಕೆಂದಿದ್ದ ಆತನ ಸ್ನೇಹಿತನ ಗ್ರಂಥ ದಿಧೀತಿಯೇ ಮೊಟ್ಟಮೊದಲ ಸ್ಥಾನವನ್ನು ಪಡೆಯಿತು. ಆತನಿಗೆ ಸಮಾಧಾನವಾಗಿರಬೇಕು.

*ಶೀರ್ಷಿಕೆಯ ಚಿತ್ರ*

ಶ್ರೀ ಕೃಷ್ಣಚೈತನ್ಯರು ತಮ್ಮ ಸಂನ್ಯಾಸಜೀವನದ ೧೩-೧೮ ವರ್ಷಗಳನ್ನು ಕಳೆದ ಪವಿತ್ರ ಪುರಿ ಕ್ಷೇತ್ರದ ಶ್ರೀಜಗನ್ನಾಥ ದೇವಾಲಯ.

ಆದರೆ ಸೊಗಸಾದ ಕೃತಿರತ್ನದಿಂದ ವಂಚಿತವಾದ ಸಾರಸ್ವತ ಪ್ರಪಂಚ ಬಡವಾಯಿತು.

ಈ ನಷ್ಟಕ್ಕೆ ಪರಿಹಾರವನ್ನು ಪ್ರಕೃತಿ ಬೇರೊಂದು ರೀತಿಯಲ್ಲಿ ಒದಗಿಸಿತು. ಅದೆಂದರೆ ಕೃತಿರತ್ನಕ್ಕಿಂತ ಸಾವಿರಪಾಲು ಹೆಚ್ಚಿನದಾದ, ಆತನು ಬಿಟ್ಟುಹೋದ ಅಪೂರ್ವವಾದ ಬದುಕು. ಮನುಷ್ಯನ ಅಂತರ್ಯದಲ್ಲಿ ಹುದುಗಿರುವ ಭಗವತ್ಪ್ರೇಮವನ್ನು ಉದ್ದೀಪಿಸುವಂತಹ ಬದುಕು ಅದು. ಬರಿದಾದ ಹೃದಯದಲ್ಲಿ ಪ್ರೇಮದ ಅಮೃತ ಸುಧೆಯನ್ನು ಹರಿಸುವುದಕ್ಕಾಗಿಯೇ ಬಾಳಿದ ಧನ್ಯವಾದ ಬದುಕು. ಆತನ ಬದುಕೊಂದು ಪ್ರೇಮದ ಗಾಥೆ.

## ಎಲ್ಲರ ಪ್ರೀತಿಯ ಗೌರಾಂಗ

ಕಲ್ಕತ್ತೆಯಿಂದ ಉತ್ತರಕ್ಕೆ ಸುಮಾರು ೭೫ ಕಿ.ಮೀ. ಆಚೆ ಗಂಗಾನದಿಯ ತೀರದಲ್ಲಿರುವ ನದಿಯಾ ಜಿಲ್ಲೆಯ ನವದ್ವೀಪ ೧೫ನೆ ಶತಮಾನದಲ್ಲಿ ವಾಣಿಜ್ಯಕೇಂದ್ರವಾಗಿದ್ದಷ್ಟೇ ಅಲ್ಲ, ಪಾಂಡಿತ್ಯದ ಪೀಠವಾಗಿತ್ತು. ನವ್ಯನ್ಯಾಯ ಎಂಬ ಆಧುನಿಕ ತರ್ಕಶಾಸ್ತ್ರವು ವಿವಿಧ ಸ್ಥಳಗಳಿಂದ ಜಿಜ್ಞಾಸುಗಳನ್ನು ಆಕರ್ಷಿಸುತ್ತಿದ್ದ ಕಾಲ ಅದು. ಒಂದು ಸಮೃದ್ಧವಾದ ನಾಡಿನಲ್ಲಿ ಪಾಂಡಿತ್ಯಕ್ಕೆ ಸಿಗುವ ಮನ್ನಣೆಗಳಿಗೆ ಅದು ಮಾದರಿಯಾಗಿತ್ತು. ಇಂತಹ ವಾತಾವರಣದಲ್ಲಿ ಜಗನ್ನಾಥಮಿಶ್ರ ಮತ್ತು ಶಚೀದೇವಿ ಎಂಬ ಬ್ರಾಹ್ಮಣ ದಂಪತಿಗಳು. ತನ್ನ ಹತ್ತು ಹೆಣ್ಣು ಮಕ್ಕಳನ್ನೂ ಸಾವು ಬಲಿತೆಗೆದುಕೊಂಡಿದ್ದನ್ನು ಅಸಹಾಯಕತೆಯಿಂದ ನೋಡುತ್ತಿದ್ದ ತಾಯಿಗೆ ವಿಶ್ವರೂಪನ ನಂತರ ಹುಟ್ಟಿದ ಮಗುವಿಗೆ ಯಾವುದೇ ಕ್ರೂರದೃಷ್ಟಿ ತಾಗದಿರಲಿ ಎಂದು ನಿಮಾಯ್ (ಬೇವಿನಸೊಪ್ಪು) ಎಂದು ಹೆಸರಿಟ್ಟಳು. ದಿವ್ಯತೇಜಸ್ಸಿನಿಂದ ಹೊಳೆಯುತ್ತಿದ್ದ ಆ ಮಗುವಿನ ರೂಪಕ್ಕೆ ಮನಸೋಲದವರಿರಲಿಲ್ಲ. ಸುವರ್ಣ ವರ್ಣದ ಕಾಂತಿಯನ್ನು ಸೂಸುತ್ತಿದ್ದ ಈ ಹಸುಳೆಯನ್ನು 'ಗೌರಾಂಗ', ಗೌರವರ್ಣದ ಮೈಯುಳ್ಳವನು ಎಂದೇ ಎಲ್ಲರೂ ಕರೆಯುತ್ತಿದ್ದರು. ಚುಂಬಕದಂತೆ ಎಲ್ಲರನ್ನೂ ಆಕರ್ಷಿಸುತ್ತಿದ್ದ ಈ ಮಗುವಿನ ಸಾನ್ನಿಧ್ಯದಲ್ಲಿ ಎಲ್ಲರೂ ತಮ್ಮ ಸ್ವಂತ ಮಕ್ಕಳ ಮೇಲಿನ ಪ್ರೀತಿಗಿಂತಲೂ ಅಧಿಕವಾದ ಪ್ರೀತಿಯನ್ನು ಅನುಭವಿಸುತ್ತಿದ್ದರು. ಹುಟ್ಟಿನಿಂದಲೇ ಅವತಾರಪುರುಷರು ಎಲ್ಲರಿಗೂ ಸೇರಿದವರಾಗಿ, ಎಲ್ಲರ ಆಸ್ತಿಯಾಗಿರುತ್ತಾರೆಂಬುದಕ್ಕೆ ಇದೊಂದು ನಿದರ್ಶನ.

ಬಾಲಲೀಲೆಯಲ್ಲಿ ಶ್ರೀಕೃಷ್ಣನನ್ನು ನೆನಪಿಸುತ್ತಿದ್ದ ಈ ಹಸುಳೆ ಬೆಳೆದಂತೆ ಎಲ್ಲರ ಮನೆಯಲ್ಲೂ ತನಗೆ ಅಧಿಕಾರವಿದೆ ಎಂಬಂತೆ ಪ್ರತಿಯೊಬ್ಬರಲ್ಲೂ ಕಾಡಿಬೇಡಿ ತಿಂಡಿ ತಿನಿಸು ಪಡೆಯುತ್ತಿದ್ದನು. ಯಾರನ್ನೂ ಬಿಡುವವನಲ್ಲ. ಅವನ ತುಂಟಾಟಗಳಿಂದ ಜನರ ಮುದ್ದಿಗೆ ಇನ್ನೂ ಹೆಚ್ಚು ಪಾತ್ರವಾಗುತ್ತಿದ್ದನು. ತಂದೆತಾಯಿಗಳಿಗೆ ಸ್ವಲ್ಪ ವಯಸ್ಸಾದನಂತರವೇ ಹುಟ್ಟಿದ್ದರಿಂದ ಅವರ ಅತಿಯಾದ ಮಮತೆಯೂ ಅವನನ್ನು ನಿಯಂತ್ರಿಸುವುದರಲ್ಲಿ ಅಡ್ಡ ಬರುತ್ತಿತ್ತು. ಮಡಿ ಆಚಾರಗಳನ್ನಿಟ್ಟುಕೊಂಡಿದ್ದ ತಾಯಿಗೆ ಬೇಸ್ತುಬೀಳುವಂತಹ ಸನ್ನಿವೇಶಗಳೇ ಹೆಚ್ಚು. ಪ್ರಸಾದವನ್ನು ಉಂಡು ಬಿಸುಟ ಒಡೆದ ಮಣ್ಣಿನ ಕುಡಿಕೆಗಳ ರಾಶಿಯ ಮೇಲೆ ಹೋಗಿ ಕುಳಿತುಕೊಳ್ಳುವನು. ತಾಯಿ ಅದು ಮೈಲಿಗೆ, ಅದರ ಮೇಲೆ ಕೂರಬಾರದು ಎಂದರೆ, ಒಮ್ಮೆ ಭಗವಂತನ ಪ್ರಸಾದದ ಸಂಪರ್ಕಕ್ಕೆ ಬಂದ ಆ ಮಣ್ಣಿನ ಕುಡಿಕೆ ಮೈಲಿಗೆಯಾಗುವುದೆಂದರೆ ಏನು ಎಂದು ಪ್ರಶ್ನಿಸುವನು. ಹಿಡಿಯಲು ಹೋದರೆ ಪಂಚಮರನ್ನು ಹೋಗಿ ಅಪ್ಪಿಕೊಳ್ಳುವನು! ಶುದ್ಧಿ ಅಶುದ್ಧಿ ಮಡಿ ಮೈಲಿಗೆ ಎಲ್ಲಕ್ಕೂ ಅತೀತನಾದ ನಿತ್ಯಶುದ್ಧನಾದ ಭಗವತ್ ಸ್ವರೂಪಿಗಲ್ಲದೆ ಇಂತಹ ವಿಚಿತ್ರವಾದ ಮಾತು ನಡವಳಿಕೆ ಮತ್ತಾರಿಗೆ ಸಾಧ್ಯ?

ಆದರೆ ಈ ತುಂಟಾಟಗಳೇನಿದ್ದರೂ ಅಣ್ಣನಾದ ವಿಶ್ವರೂಪನು ಸಂನ್ಯಾಸ ಸ್ವೀಕರಿಸಿ ಮನೆಬಿಟ್ಟು ಹೊರಟುಹೋಗುವವರೆಗಷ್ಟೆ. ಮೊದಲೇ ವಯಸ್ಸಾದ ತಂದೆ-ತಾಯಿಯ ದುಃಖ ಹೇಳತೀರದು. ನಿಮಾಯ್ ಗಂಭೀರನಾದ, ಅಂತರ್ಮುಖಿಯಾದ. ಈಗ ನಿಮಾಯ್ ಒಬ್ಬನೇ ಅವರ ಸರ್ವಸ್ವವಾದ.

## ವ್ಯಾಸಂಗ, ವಿದ್ವತ್ತು ಮತ್ತು ಸಂಸಾರ

ಬಹಳ ಚುರುಕಾಗಿದ್ದ ನಿಮಾಯ್ ಶ್ರುತಿಧರ—ಯಾವುದನ್ನೇ ಆಗಲಿ ಒಮ್ಮೆ ಕೇಳಿ ಗ್ರಹಿಸಿದರೆ ದೀರ್ಘಕಾಲ ನೆನಪಿನಲ್ಲಿಟ್ಟುಕೊಳ್ಳುತ್ತಿದ್ದ ಅಸಾಧಾರಣ ಬುದ್ಧಿವಂತನಾಗಿದ್ದನು. ತನ್ನ ಅರಿವನ್ನು ಹೆಚ್ಚಿಸಿಕೊಳ್ಳಲು ಸದಾ ತವಕ ಪಡುತ್ತಿದ್ದುದರಿಂದ ತಂದೆಯು ಸಂಗ್ರಹಿಸಿದ್ದ ಉತ್ತಮ ಗ್ರಂಥಗಳನ್ನು ಮನೆಯಲ್ಲಿಯೇ ಓದಿ ತನ್ನ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಂಡು ನ್ಯಾಯಶಾಸ್ತ್ರದಲ್ಲೇ ಅಪೂರ್ವವಾದ ಕೃತಿರತ್ನವೊಂದನ್ನು ವಿದ್ಯಾರ್ಥಿದೆಸೆಯಲ್ಲಿರುವಾಗಲೇ ರಚಿಸಿದ್ದನು. ನಾವು ಆರಂಭದಲ್ಲಿ ಉಲ್ಲೇಖಿಸಿದ ಘಟನೆ ಈ ಅವಧಿಗೇ ಸಂಬಂಧಿಸಿದ್ದು.

ಇನ್ನೂ ವ್ಯಾಸಂಗ ಮಾಡುತ್ತಿರುವಾಗಲೇ ತಂದೆ ಕಾಲವಾದರು. ವಿದ್ವತ್‌ಪ್ರಪಂಚದ ಗಮನ ಸೆಳೆಯುತ್ತಿದ್ದ ಈತ ವಯಸ್ಸಿಗೆ ಬಂದಾಗ ತಾಯಿ ಮದುವೆಗೆ ತ್ವರೆ ಮಾಡಿದಳು. ಸಂಸಾರದ ಹೊಣೆಯನ್ನು ನಿರ್ವಹಿಸಲು ತಾನೇ ಪಾಠಶಾಲೆಯನ್ನು ಆರಂಭಿಸಿದ. ಒಮ್ಮೆ ಪೂರ್ವ ಬಂಗಾಳದ ಕಡೆ ವಿದ್ವತ್ ಗೋಷ್ಠಿಯೊಂದರಲ್ಲಿ ಆತನ ಪ್ರತಿವಾದಿಗಳೂ ಆತನ ಪಾಂಡಿತ್ಯಕ್ಕೆ ತಲೆದೂಗುವಂತೆ ಮಾಡಿ ಅಪಾರ ಬಹುಮಾನಗಳನ್ನು ಪಡೆದು ಮನೆಗೆ ಹಿಂದಿರುಗುವಷ್ಟರಲ್ಲಿ ತನ್ನ ಹೆಂಡತಿಗೆ ಹಾವು ಕಚ್ಚಿ ಸಾವನ್ನಪ್ಪಿದ್ದಳು. ತಾಯಿ ಶಚೀದೇವಿ ಮಗನಿಗೆ ಹೇಳದೆಯೇ ಎರಡನೇ ಮದುವೆಯ ವ್ಯವಸ್ಥೆ ಮಾಡಿದಳು. ಒಲ್ಲದ ಮನಸ್ಸಿನಿಂದ ಮದುವೆಯಾದರೂ, ಮದುವೆಯಾಗಿ ಬಂದ ವಿಷ್ಣುಪ್ರಿಯಾ ಗಂಡನಿಗೆ ಅನುರೂಪಳಾದ ಪತ್ನಿಯಾಗಿದ್ದಳು. ಗೌರಾಂಗರ ತ್ಯಾಗವು ಜಗತ್ತಿಗೆ ಗೊತ್ತಿದೆ. ಆದರೆ ವಿಷ್ಣುಪ್ರಿಯಳಂತೂ ಸಂಯಮದಲ್ಲಿ, ಕಠೋರ ತಪಸ್ಸಿನಲ್ಲಿ ಗಂಡನ ತ್ಯಾಗಜೀವನಕ್ಕೆ ಸಮಸಮವಾದ ಬದುಕನ್ನು ಬಾಳಿದಾಕೆ.

## ಬದಲಾದ ಬದುಕಿನ ದಿಕ್ಕು

ಒಮ್ಮೆ ಪಿತೃಗಳಿಗೆ ಶ್ರಾದ್ಧವನ್ನರ್ಪಿಸಲು ಗೌರಾಂಗರು ಗಯೆಗೆ ಹೊರಟರು. ಈ ಯಾತ್ರೆ ಅವರ ಜೀವನದ ದಿಕ್ಕನ್ನೇ ಬದಲಿಸಿತು. ಆ ನಗರದ ಪವಿತ್ರ ವಾತಾವರಣ, ಗದಾಧರ ಎಂದು ಕರೆಯಲ್ಪಡುವ ವಿಷ್ಣುವಿನ ದೇವಾಲಯ, ಅದರಲ್ಲೂ ದೇವಾಲಯದ ಒಳಗಿದ್ದ ವಿಷ್ಣುವಿನ ಪಾದಮುದ್ರೆಗಳು—ಇವೆಲ್ಲದರಿಂದ ಒಂದು ಅಲೌಕಿಕ

ಭಾವ ಆತನಲ್ಲಿ ಮೂಡಿತು. ಶ್ರೀವಿಷ್ಣುವಿನ ಆ ಪವಿತ್ರ ಪಾದ ಮುದ್ರೆಗಳೆಡೆಯೇ ತದೇಕ ಚಿತ್ತದಿಂದ ನೋಡುತ್ತ ಕಲ್ಲಿನ ಪ್ರತಿಮೆಯಂತೆ ಸ್ವಲ್ಪವೂ ಚಲನೆಯಿಲ್ಲದಂತೆ ಗಾಢಧ್ಯಾನಮಗ್ನ ರಾದರು. ಬಾಹ್ಯಪ್ರಜ್ಞೆಯೇ ಹೊರಟುಹೋಯಿತು. ಕಣ್ಣಿನಿಂದ ಧಾರಾಕಾರವಾಗಿ ನೀರು ಸುರಿಯಲಾರಂಭಿಸಿತು—ಎಷ್ಟರಮಟ್ಟಿಗೆ ಎಂದರೆ ಆತನುಟ್ಟಿದ್ದ ಬಟ್ಟೆಗಳೆಲ್ಲ ಕಣ್ಣೀರಿನಿಂದ ಒದ್ದೆಯಾದವು. ಹೀಗೆಯೇ ಧ್ಯಾನದಲ್ಲಿ ತಲ್ಲೀನರಾಗಿ ಇನ್ನೇನು ನೆಲಕ್ಕೆ ಬಿದ್ದು ಹೋಗುವುದರಲ್ಲಿದ್ದ ಅವರನ್ನು ಹಿಂದಿನಿಂದ ಈಶ್ವರಪುರಿಯೆಂಬ ಯತಿಗಳು ಎತ್ತಿ ಹಿಡಿದರು. ಈ ಹಿಂದೆಯೇ ಈಶ್ವರಪುರಿಯವರನ್ನು ತಮ್ಮ ಆಧ್ಯಾತ್ಮಿಕ ಗುರುವೆಂದು ಸ್ವೀಕರಿಸಿದ್ದರು. ನಿಧಾನವಾಗಿ ಬಾಹ್ಯಜ್ಞಾನ ಬಂದಾಗ, ಅತ್ಯಂತ ದೀನರಾಗಿ ತಮ್ಮ ಗುರುವಿನಲ್ಲಿ, 'ಗುರುದೇವ, ನನ್ನನ್ನು ಈ ಸಂಸಾರದಿಂದ ವಿಮೋಚನೆ ಮಾಡಿ. ಶ್ರೀಕೃಷ್ಣನಲ್ಲಿ ರಾಧೆಗಿದ್ದ ಗಾಢವಾದ ಆ ಪ್ರೇಮದೀಕ್ಷೆಯನ್ನು ಕೊಡಿ' ಎಂದು ಅಂಗಲಾಚಿದರು. ಅವರಿಂದ ದ್ವಾದಶಾಕ್ಷರದ ಶ್ರೀಕೃಷ್ಣನ ಮಂತ್ರೋಪದೇಶವಾಯಿತು. ಈ ಘಟನೆಯ ನಂತರ ಗೌರಾಂಗರು ಹೊಸವ್ಯಕ್ತಿಯಾದರು. ಆ ಪವಿತ್ರ ನಗರಿ ಗಯೆಯನ್ನು ಹೊಕ್ಕಾಗ ಅವರೊಬ್ಬ ಅಭಿಮಾನಿ ಸುಂದರ ನಾಜೂಕ ಯುವಕರಾಗಿದ್ದರಷ್ಟೆ. ಈಗ ಆತ ಹಿಂದಿನಂತಿರಲು ಸಾಧ್ಯವಾಗಲಿಲ್ಲ. ಹರಿಭಕ್ತಿಯ ದೆಸೆಯಿಂದ ಪ್ರಾಪಂಚಿಕ ವಿಷಯಗಳಿಂದ ಮನಸ್ಸು ದೂರ ಹೋಗಿತ್ತು. ಅವರಲ್ಲಿ ಈಗ ಪಾಂಡಿತ್ಯದ ತೇಜಸ್ಸಾಗಲಿ, ವಾದ ವಿವಾದಗಳಲ್ಲಿ ರಂಜನೆಯಾಗಲಿ ಯಾವುದೂ ಕಾಣುತ್ತಿರಲಿಲ್ಲ. ದೈವ ಪುರುಷರಿಗೆ ಸಾಮಾನ್ಯವಾದ ದಯೆ ಮತ್ತು ದೈನ್ಯತೆಗಳು ಅವರಲ್ಲಿ ಉತ್ಪನ್ನವಾದುವು. ಅಲ್ಲಿಗೆ ಈ ತನಕ ನಡೆಸಿದ್ದ ಬೌದ್ಧಿಕ ಜೀವನದ ಮೇಲೆ ಶಾಶ್ವತವಾದ ತೆರೆ ಬಿತ್ತು.

ಊಟ ತಿಂಡಿಯ ಪರಿವೆಯೂ ಇಲ್ಲದೆ ಯಾವಾಗಲೂ ಭಗವದ್ಧ್ಯಾನದಲ್ಲಿ ಅಂತರ್ಮುಖಿಯಾದರು. ಅನೇಕ ಬಾರಿ ತಮಗೆ ತಾವೇ ಈ ರೀತಿ ಹೇಳಿಕೊಳ್ಳುವರು : 'ಓ ಪ್ರಭೋ, ಎಲ್ಲಿದ್ದೀಯೆ? ನನ್ನ ತಂದೆ ತಾಯಿ ಬಂಧು ಬಳಗ ಸರ್ವಸ್ವವೂ ನೀನೇ—ನಿನ್ನ ನಿಜಸ್ವರೂಪವನ್ನು ತಿಳಿಸು.' ಒಮ್ಮೊಮ್ಮೆ ಶೂನ್ಯವಾದ ನೋಟ ದಲ್ಲೇ ತಲ್ಲೀನರಾಗಿರುವರು. ತಮ್ಮ ಜೊತೆಗಾರರೊಡನೆ ಇರುವಾಗ ತಮ್ಮ ಈ ಧ್ಯಾನಭಾವವನ್ನು ಅವರಿಂದ ಮರೆಮಾಚಲು ಮಿತಿಮೀರಿ ಪ್ರಯತ್ನಿಸುತ್ತಿದ್ದರು. ಸುತ್ತಮುತ್ತ ಏನಾಗುತ್ತಿದೆ ಎಂಬುದರ ಪರಿವೆಯೂ ಇರುತ್ತಿರಲಿಲ್ಲ. ಗೌರಾಂಗರು ಪ್ರಪಂಚದ ಪಾಲಿಗೆ ಸತ್ತಂತೆಯೇ ಆದರು.

ಗೌರಾಂಗರು ನವದ್ವೀಪಕ್ಕೆ ಹಿಂದಿರುಗಿದ ಮೇಲೆ ಅಲ್ಲಿಯ ಜನರು ಇವರಿಗೆ ಹುಚ್ಚು ಹಿಡಿಯಿತೇನೊ ಎಂದು ಅನುಮಾನ ಪಡುವಂತಾಯಿತು. ಗೌರಾಂಗರ ನಡವಳಿಕೆ ಜನರ ಅನುಮಾನವನ್ನು ಬಲಪಡಿಸುವಂತಿದ್ದವು. ಒಂದು ಕೋಣೆಯಲ್ಲಿ ಕದ ಹಾಕಿಕೊಂಡು ಗಂಟೆಗಟ್ಟಳೆ ಏಕಾಂತದಲ್ಲಿ ಇದ್ದುಬಿಡುತ್ತಿದ್ದರು. ಅವರ ಸರ್ವಸ್ವ ವನ್ನೂ ಶ್ರೀಕೃಷ್ಣ ತುಂಬಿಕೊಂಡಿದ್ದ ಹಾಗಿತ್ತು. ಈ ಸ್ಥಿತಿಯಲ್ಲೂ ಅವರು ತಮ್ಮ ಪಾಠಶಾಲೆಯನ್ನು ನಡೆಸಿಕೊಂಡು ಹೋಗಲು ಪ್ರಯತ್ನಿಸಿದರು ನಿಜ. ಆದರೆ ಅವರ ಕಲಿಸುವಿಕೆ ದಾರಿ ತಪ್ಪಿತ್ತು. ಕೃಷ್ಣನ ವಿಷಯವನ್ನಲ್ಲದೆ ಬೇರೆ ಇನ್ನೇನನ್ನೂ ಹೇಳಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಕೊನೆಗೆ ತಮ್ಮ ಶಿಷ್ಯಂದಿರನ್ನು ಕರೆದು 'ಹರಿನಾಮದ ಹೊರತು ಯಾವ ಶಾಸ್ತ್ರವೂ ನನ್ನಿಂದ ಹೊರಡದು. ಇದು ನಿಜವಾದ ನನ್ನ ಪರಿಸ್ಥಿತಿ. ನೀವು ಇಷ್ಟ ಬಂದ ಕಡೆ ಹೋಗಿ' ಎಂದರು.

## ನಾಮ ಸಂಕೀರ್ತನೆಯ ಗೋಷ್ಠಿ

ಇತ್ತ ಮನೆಯಲ್ಲಿ ಹುಚ್ಚನಂತೆ ಹರಿಯನ್ನು ನೆನೆದು ರೋದಿಸುವ ಮಗನಿಗೆ ಸಮಾಧಾನ ಹೇಳಲು ತಿಳಿಯದೆ ಶಚೀದೇವಿಯು 'ಇರುವ ಒಬ್ಬನೇ ಮಗನೂ ಈ ದುಃಸ್ಥಿತಿಗೀಡಾದನಲ್ಲ' ಎಂದು ಕೊರಗಿದರೆ, ಕೈಹಿಡಿದ ಹೆಂಡತಿಯಂತೂ ತನ್ನ ಪತಿದೇವನ ಪರಿಸ್ಥಿತಿ ಸುಧಾರಿಸುವಂತೆ ಯಾರಾದರೂ ಮಾಡಬಲ್ಲರೇ ಎಂದು ಪರಿತಪಿಸುತ್ತಿದ್ದಳು. ಕೊನೆಗೆ ಅದೇ ಊರಿನ ಶ್ರೀವಾಸರೆಂಬ ಹರಿಭಕ್ತರೊಬ್ಬರನ್ನು ಏನಾದರೂ ಪರಿಹಾರ ಸೂಚಿಸುವಂತೆ ತಾಯಿ ಮತ್ತು ಹೆಂಡತಿ ಕೇಳಿಕೊಂಡರು. ಹರಿಭಕ್ತಿಯಿಂದ ತನ್ನಲ್ಲೇ ಉಂಟಾಗುತ್ತಿದ್ದ ಅನುಭವದಿಂದ ಆತ ಗೌರಾಂಗರ ಪರಿಸ್ಥಿತಿಯನ್ನು ಸರಿಯಾಗಿ ತಿಳಿದರು. 'ಇವರ ವ್ಯಾಧಿಗೆ ವಾಸುದೇವನೇ ಮದ್ದು' ಎಂದು, ಕೂಡಲೇ ಗೌರಾಂಗರನ್ನು ತಮ್ಮ ವೈಷ್ಣವ ಮಂಡಲಿಗೆ ಆಹ್ವಾನಿಸಿದರು. ಆ ವೈಷ್ಣವ ಮಂಡಲಿಯಲ್ಲಿ ಭಾಗವತ ಶ್ರವಣ ನಡೆಯುತ್ತಿತ್ತು. ಗೌರಾಂಗರು ಆ ಮಂಡಲಿಯನ್ನು ಸೇರಿ ತಮ್ಮ ಉತ್ಕಟ ಭಕ್ತಿಗೆ ಒಂದು ಮೂರ್ತಸ್ವರೂಪ ಕೊಡಲು ಶಕ್ತರಾದರು. ಅನೇಕರು ಗುಂಪುಗುಂಪಾಗಿ ಸೇರಿ ಪರಮಾತ್ಮನನ್ನು ಸ್ತುತಿಸಿ ಭಜಿಸಲು ಅನುಕೂಲವಾಗುವಂತೆ 'ಸಂಕೀರ್ತನೆ' ಎಂಬ ನವೀನವಾದ ನಾಮ ಭಜನೆಯನ್ನು ಕಲ್ಪಿಸಿದರು. ಅದು ಆ ಕಾಲಕ್ಕೆ ಹೊಸತು. ನೆರೆದ ಭಕ್ತರಲ್ಲಿ ಭಾವೋದ್ರೇಕವಾಗುವಂತೆ ಮಾಡಿ ಏಕ ಚಿತ್ತದಿಂದ ದೇವರನ್ನು ಧ್ಯಾನಿಸುವಂತೆ ಮಾಡುವ ಶಕ್ತಿಯು ಆ ಸಾಧನದಲ್ಲಿದೆ. ಸಂಕೀರ್ತನೆಗೆ ನೆರೆದ ಭಕ್ತರ ಮಧ್ಯೆ ಗೌರಾಂಗರು ಇಂಪಾಗಿ ಹಾಡುತ್ತ ಎರಡೂ ಕೈಗಳನ್ನು ಮೇಲೆತ್ತಿ ಪದೇ ಪದೇ 'ಹರಿಬೋಲ್, ಹರಿಬೋಲ್' ಎಂದು ಭಕ್ತಿಯ ಆವೇಶದಲ್ಲಿ ನೃತ್ಯಮಾಡುತ್ತಿದ್ದರು. ಕೆಲವು ವೇಳೆ ರಾಧೆಯ ವಿರಹವೇದನೆಯನ್ನು ಎದೆಗೆ ತಟ್ಟುವಂತೆ ವರ್ಣಿಸುವ ಸಂಕೀರ್ತನೆಯ ಮಧ್ಯೆ ಒಂದೇ ಸಮನೆ ಸುರಿಯುವ ಕಣ್ಣೀರಿನೊಡನೆ ತಮ್ಮ ಇರವನ್ನೇ ಮರೆತು ಶಿಲಾವಿಗ್ರಹದಂತೆ ನಿಂತಲ್ಲೇ ನಿಂತುಬಿಡುತ್ತಿದ್ದರು. ಭಕ್ತಿಯ ಅಮಲಿನಲ್ಲಿ ಹರಿಯನ್ನು ಹಿಂಬಾಲಿಸುವಂತೆ ಓಡಿ ಆಯಾಸದಿಂದ ಜ್ಞಾನತಪ್ಪಿ ಬೀಳುತ್ತಿದ್ದರು. ಶ್ರೀಗೌರಾಂಗರ ನೃತ್ಯ, ಸಂಕೀರ್ತನೆಗಳು ಭಕ್ತಿಯನ್ನು ಉದ್ದೀಪನಗೊಳಿಸುವ ಮುಖ್ಯವಾದ ಸಾಧನಗಳಾದವು.

## ದಿವ್ಯಭಾವ ಹಾಗೂ ಜಗಾಯ್ ಮಧಾಯ್‌ರ ಪರಿವರ್ತನೆ

ಒಮ್ಮೊಮ್ಮೆ ಭಕ್ತನ ಭಾವದಿಂದ ಗೌರಾಂಗರಲ್ಲಿ ದಿವ್ಯಭಾವ ತಾನೇ ತಾನಾಗಿ ಪ್ರಕಟವಾಗುತ್ತಿತ್ತು. ಆಗ ಎಲ್ಲರ ಪೂಜೆ ಆರಾಧನೆಗಳಿಗೆ ಪಾತ್ರರಾಗುತ್ತಿದ್ದರು. ಸಂಕೀರ್ತನೆಯಲ್ಲಿ ಒಮ್ಮೊಮ್ಮೆ ದಿವ್ಯಭಾವದಲ್ಲಿ ಶ್ರೀವಿಷ್ಣುವಿಗೆಂದು ಅರ್ಪಿತವಾಗಿರುವ ವಿಷ್ಣು ಪೀಠದ ಮೇಲೆ ಕುಳಿತುಕೊಳ್ಳುತ್ತಿದ್ದರು. ಇಡೀ ಕೋಣೆ ಅವರ ಮೈಯಿಂದ ಹೊರಬಂದ ಕಾಂತಿಯಲ್ಲಿ ಬೆಳಗುತ್ತಿತ್ತು. ಮೃದುವಾದ

ಮಂದಹಾಸದ ಅವರ ಮುಖಮಂಡಲದಲ್ಲಿ ಮಾಧುರ್ಯ ಮನೆ ಮಾಡಿರುತ್ತಿತ್ತು. ಶ್ರೀ ಗೌರಾಂಗರ ಅಪೂರ್ವವಾದ ಭಕ್ತಿಯ ಪ್ರಭಾವದಿಂದ ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡಿದ್ದ ಹರಿದಾಸನು ವೈಷ್ಣವ ಪಂಥಕ್ಕೆ ಪರಿವರ್ತಿತನಾದನು. ಇದು ಏನಿದ್ದರೂ ಆರಂಭ ಮಾತ್ರ. ಜನರು ತಂಡೋಪತಂಡವಾಗಿ ಜಾತಿ ಮತ ಕುಲ ದೇಶಗಳ ಭೇದಗಳಿಲ್ಲದೆ ಭಗವನ್ನಾಮದ ಮಹಿಮೆಯಿಂದ ಭಕ್ತರಾಗಿ ಪರಿವರ್ತಿತರಾಗುತ್ತಿದ್ದರು. ಶ್ರೀಗೌರಾಂಗರ ನಿಚ್ಚಳ, ನಿಷ್ಕಾಪಟ್ಯ, ಆಧ್ಯಾತ್ಮಿಕ ವ್ಯಕ್ತಿತ್ವದ ಆಕರ್ಷಣ ಶಕ್ತಿ ಕೆಲವು ವೇಳೆ ದುರ್ಜನರ ಮೇಲೂ ಗಂಭೀರ ಪ್ರಭಾವವನ್ನು ಬೀರುತ್ತಿತ್ತು. ಜಗಾಯ್ ಹಾಗೂ ಮಧಾಯ್ ಅವರ ಸಂಗತಿ ಇದಕ್ಕೊಂದು ನಿದರ್ಶನ. ಇವರಿಬ್ಬರೂ ನವದ್ವೀಪದಲ್ಲಿ ದುಷ್ಕೃತ್ಯಗಳಿಗೂ, ಕ್ರೂರತನಕ್ಕೂ ಕುಖ್ಯಾತರಾಗಿದ್ದರು. ಅವರನ್ನು ಹರಿಯ ನಾಮ ಬಲದಿಂದ ಪರಿವರ್ತನೆ ಮಾಡಲೆಂದೇ ಬಂದ ಗೌರಾಂಗರ ಸಂಗಡಿಗ ನಿತ್ಯಾನಂದರನ್ನು ರಕ್ತ ಬರುವಂತೆ ಅವರಿಬ್ಬರು ಮದ್ಯದ ಕುಡಿಕೆಯಿಂದ ಹೊಡೆದರು. ಆಗ ಗೌರಾಂಗರು ಅಲ್ಲಿಗೆ ಬಂದು, 'ಈ ಬಡ ಬೈರಾಗಿಯನ್ನು ಘಾಸಿಗೊಳಿಸುವುದಕ್ಕಿಂತ ನನ್ನನ್ನು ಘಾಸಿಗೊಳಿಸಿ' ಎಂದು ಬೇಡಿಕೊಂಡರು. ಮದ್ಯದ ಅಮಲಿನಲ್ಲಿದ್ದ ಅವರನ್ನು ಗೌರಾಂಗರು ಆಲಿಂಗಿಸಿದ್ದೇ ತಡ ಅವರಲ್ಲಿ ಅದ್ಭುತ ಪರಿವರ್ತನೆಯಾಯಿತು. ಗೌರಾಂಗರ ಪ್ರೇಮಮಯೀ ಪ್ರಭಾವದಿಂದ ಅವರಿಬ್ಬರಲ್ಲಾದ ಹೃದಯಪರಿವರ್ತನೆ ಮನೆಮಾತಾಯಿತು.



ಭಗವಾನ್ ಶ್ರೀಕೃಷ್ಣ ಚೈತನ್ಯ

## ಸಂನ್ಯಾಸದ ನಿರ್ಧಾರ

ಗೌರಾಂಗರಿಂದ ಹುಟ್ಟುಹಾಕಲ್ಪಟ್ಟ 'ನಾಮಸಂಕೀರ್ತನೆ'ಯ ಮಾರ್ಗ ಅತ್ಯಂತ ಪ್ರಭಾವಶಾಲಿಯಾಗಿದ್ದುದನ್ನು ಕಂಡು ನವದ್ವೀಪದ ಕೆಲವು ಒಣ ಪಂಡಿತರ ಕಣ್ಣು ಕಿಸುರಾಗಿತ್ತು. ಅವರು ತಮ್ಮ ಅಲ್ಪತನದಿಂದ ಗೌರಾಂಗರಿಗೆ ಉಪಟಳವನ್ನು ಕೊಡುತ್ತಿದ್ದರು. ಆಗ ಗೌರಾಂಗರಿಗೆ ಸಮಾಜದಿಂದ ಹೊರಗೇ ನಿಲ್ಲುವಂತಹ ಚತುರ್ಥಾಶ್ರಮವನ್ನು ಆಶ್ರಯಿಸಿದರೆ ನಾಮಸಂಕೀರ್ತನೆಯ ಮಾರ್ಗಕ್ಕೆ ಪುಷ್ಟಿ ಬರುವುದೆಂದು ಅನ್ನಿಸಿತು. ಅದೂ ಅಲ್ಲದೆ ಶ್ರೀಕೃಷ್ಣನ ಲೀಲಾಸ್ಥಾನವಾದ ಬೃಂದಾವನದ ಆಕರ್ಷಣೆ ಗೌರಾಂಗರಲ್ಲಿ ದಿನೇ ದಿನೇ ಪ್ರಬಲವಾಗುತ್ತಿತ್ತು. ಬೃಂದಾವನದಲ್ಲೇ ನೆಲೆಸಿ ಶ್ರೀಕೃಷ್ಣನ ಪ್ರೇಮವನ್ನು ರಾಧೆಯಂತೆ ಅವಿಚ್ಛಿನ್ನವಾಗಿ ಅನುಭವಿಸಬೇಕೆಂಬ ಬಯಕೆ ಅವರನ್ನು ದಹಿಸುತ್ತಿತ್ತು. ತನ್ನ ಸರ್ವಸ್ವವೆಲ್ಲವೂ ಭಗವಂತನೊಬ್ಬನೇ ಎಂಬ ಬದುಕು ತಮ್ಮದಾಗಬೇಕಾದರೆ ಯತ್ಯಾಶ್ರಮಕ್ಕಿಂತ ಶ್ರೇಷ್ಠವಾದ ಆಶ್ರಮ ಬೇರೊಂದಿಲ್ಲ ಎಂದೆಣಿಸಿ ಸಂನ್ಯಾಸವನ್ನು ತೆಗೆದುಕೊಳ್ಳುವ ಸಂಕಲ್ಪ ಮಾಡಿದರು.

ನವದ್ವೀಪದಲ್ಲಿ ಇದರ ವಾಸನೆ ಹತ್ತಿದೊಡನೆ ಎಲ್ಲರಿಗೂ ಆಘಾತವಾಯಿತು. ಬೀದಿಯ ಅಂಗಡಿಗಳೆಲ್ಲ ವ್ಯಾಪಾರ ನಿಲ್ಲಿಸಿ ಮುಚ್ಚಿದವು. ಜನರು ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಅವರಿಗೆ ಕಿರುಕುಳ ಕೊಡುತ್ತಿದ್ದವರೂ ಕೂಡ ಈಗ ಪಶ್ಚಾತ್ತಾಪ ಪಡುತ್ತಿದ್ದರು. ಆದರೆ ಗೌರಾಂಗರ ಸಂನ್ಯಾಸ ಸ್ವೀಕಾರಕ್ಕೆ ಇದ್ದ ದೊಡ್ಡ ಪ್ರತಿರೋಧವೆಂದರೆ ಅವರ ತಾಯಿಯದು. 'ನೀನು ಹೊರಟರೆ ನನ್ನ ಜೀವವು ಎಣ್ಣೆಯಿಲ್ಲದ ದೀಪದಂತೆ ನಂದಿ ಹೋಗುವುದು, ನಿನ್ನನ್ನೇ ನೆಚ್ಚಿಕೊಂಡಿರುವ ಆ ಎಳೆಜೀವ ವಿಷ್ಣುಪ್ರಿಯಳಂತೂ ಈ ಆಘಾತವನ್ನು ಸಹಿಸಲಾರಳು' ಎಂದು ಪರಿಪರಿಯಾಗಿ ಗೋಳಿಟ್ಟಳು. ಆದರೆ ಗೌರಾಂಗರಿಗೆ ತಾವು ಮಾಡಿದ ಸಂಕಲ್ಪಕ್ಕೆ ಮಾತೃವಾತ್ಸಲ್ಯವಾಗಲಿ, ಪತ್ನಿಯ ಪ್ರೇಮವಾಗಲಿ ತಡೆಯಾಗಲಿಲ್ಲ. ಹರಿಯೇ ತನ್ನ ಗುರಿಯೆಂದು ನಂಬಿ ಮಾತಾ ಪತ್ನಿಯರನ್ನು ಸಂತೈಸಿ ತನ್ನ ಆಧ್ಯಾತ್ಮಿಕ ಜೀವನವು ಸಫಲವಾಗುವಂತೆ ಸಹಕರಿಸಬೇಕೆಂದು ಅವರನ್ನು ಬೇಡಿದರು. ತನಗೆ ಒಲ್ಲದ ಮನಸ್ಸಿನಿಂದ ಮಗನ ಪ್ರಾರ್ಥನೆಗೆ ಒಪ್ಪಿಗೆ ಕೊಡಬೇಕಾಗಿ ಬಂದುದು ಆಕೆಯ ದುಃಖವನ್ನು ತೀವ್ರಗೊಳಿಸಿತು. ಈ ಪ್ರಕರಣದಲ್ಲಿ ಆಕೆ ಮಗನಿಗೆ ತಕ್ಕ ತಾಯಿಯಾಗಿ ನಡೆದುಕೊಂಡಳು.

## ಯತ್ಯಾಶ್ರಮ ಮತ್ತು ಪುರೀ ಯಾತ್ರೆ

ಸಂನ್ಯಾಸಾಶ್ರಮ ಸ್ವೀಕರಿಸಲು ಗೌರಾಂಗರು ಬರ್ದವಾನ್ ಜಿಲ್ಲೆಯ ಕಾಟ್ವಾ ನಗರಕ್ಕೆ ತೆರಳಿ ಕೇಶವ ಭಾರತಿ ಎಂಬ ಯತೀಶ್ವರರನ್ನು ಕಂಡರು. ಆಗ ಅವರಿಗೆ ಕೇವಲ ೨೪ವರ್ಷ. ಗೌರಾಂಗರಿಗೆ ಸಂನ್ಯಾಸದೀಕ್ಷೆಯನ್ನು ವಹಿಸುವ ಕಾಲದಲ್ಲಿ ಕೇಶವ ಭಾರತಿಯವರು,'ಗೌರಾಂಗ, ನೀನು ಕೃಷ್ಣ ಸಂಕೀರ್ತನೆಯ ಮೂಲಕ ಲೋಕಕ್ಕೆ ನವಚೇತನವನ್ನು ತಂದಿರುವೆ. ಆದಕಾರಣ, ಸಂನ್ಯಾಸ ಜೀವನದಲ್ಲಿ ಶ್ರೀಕೃಷ್ಣ ಚೈತನ್ಯನೆಂಬ ಹೆಸರೇ ನಿನಗೆ ಶೋಭಿಸುತ್ತದೆ' ಎಂದು ಹೇಳಿ ಅವರಿಗೆ ಆ ಹೆಸರಿಟ್ಟರು. ನವಯೌವನದಲ್ಲಿ ಐಹಿಕ ಜೀವನವನ್ನು ತ್ಯಜಿಸಿದ ಯತಿಯನ್ನು ಕಾಣಲು ಸುತ್ತಮುತ್ತಲಿನ ಗ್ರಾಮವಾಸಿಗಳು ಬಂದರು. ಸೂರ್ಯಕಾಂತಿಯನ್ನೂ ನಾಚಿಸುವ ಅವರ ದಿವ್ಯ ತೇಜಸ್ಸನ್ನು ಕಂಡು ದಂಗುಬಡಿದವರಂತಾದರು. ಶ್ರೀಚೈತನ್ಯರು ಧರಿಸಿದ್ದ ಕಾವಿಯ ವಸ್ತ್ರದಿಂದ ಅವರ ಗೌರವರ್ಣಕ್ಕೆ ದಿವ್ಯವಾದೊಂದು ಕಳೆ ತುಂಬಿದ್ದಿತು.

ಸಂನ್ಯಾಸಿಯಾದ ಶ್ರೀಚೈತನ್ಯರು ಕಟ್ವಾದಿಂದ ನವದ್ವೀಪಕ್ಕೆ ಹಿಂದಿರುಗಲಿಲ್ಲ, ಬಂಗಾಲವನ್ನೇ ಬಿಟ್ಟುಹೋಗಲು ನಿರ್ಧರಿಸಿದರು. ತಾಯಿಯ ಕೋರಿಕೆಯ ಮೇರೆಗೆ ದೂರದ ಬೃಂದಾವನಕ್ಕೆ

ಹೋಗುವ ಬದಲು ಹತ್ತಿರದ ಪುರಿಕ್ಷೇತ್ರಕ್ಕೆ ಹೊರಟರು. ಪುರಿ ಜಗನ್ನಾಥ ದೇವಾಲಯದ ಗೋಪುರವನ್ನು ದೂರದಿಂದಲೇ ಕಂಡು ಮತ್ತೇರಿದಂತವರಾಗಿ ತಮ್ಮ ಸಹಚರರೊಡನೆ ಹರಿಭಜನೆಯೊಂದಿಗೆ ನೃತ್ಯ ಮಾಡುತ್ತಾ ಮುಂದೆ ಸಾಗಿದರು. ಜಗನ್ನಾಥ ದರ್ಶನಕ್ಕಾಗಿ ನೇರವಾಗಿ ಗುಡಿಗೆ ಹೋಗಿ ತಮ್ಮ ರಸಭಾವಕ್ಕನುಗುಣವಾದ ಉತ್ಸಾಹದಿಂದ ಜಗನ್ನಾಥಮೂರ್ತಿಯ ವಿಗ್ರಹವನ್ನು ಆಲಿಂಗಿಸಲು ಹೋಗಿ ಜ್ಞಾನ ತಪ್ಪಿ ಬಿದ್ದುಬಿಟ್ಟರು. ದೇವಸ್ಥಾನದ ದರವಾನರು ಶ್ರೀಚೈತನ್ಯರನ್ನು ಹುಚ್ಚನೆಂದು ಬಗೆದು ಬಡಿದು ಅಟ್ಟಲು ಪ್ರಯತ್ನಿಸುತ್ತಿದ್ದಾಗ ಅದೃಷ್ಟವಶಾತ್ ಅಲ್ಲಿಗೆ ಆಗಮಿಸಿದ ವಾಸುದೇವ ಸಾರ್ವಭೌಮರೆಂಬ ಪಂಡಿತರು ಅವರನ್ನು ತಮ್ಮ ಮನೆಗೆ ಕರೆತಂದು ಉಪಚರಿಸಿದರು. ಅವರೂ ಸಹ ಚೈತನ್ಯರಿಂದ ಮುಂದೆ ಪರಿವರ್ತಿತರಾದರು.

## ಇತರೆ ಯಾತ್ರೆಗಳು

ಚೈತನ್ಯರು ತಮ್ಮ ಸಹಚರರೊಡನೆ ಪುರಿಯಿಂದ ದಕ್ಷಿಣದ ಕಡೆಯೂ ಹೊರಟರು. ತಿರುಪತಿಯ ಶ್ರೀವೆಂಕಟೇಶ್ವರನ ದರ್ಶನ ಮಾಡಿ, ಕಾವೇರಿ ತಟದಲ್ಲಿದ್ದ ಕಾಂಚಿಪುರ ಶ್ರೀರಂಗವಷ್ಟೆ ಅಲ್ಲದೆ ಉಡುಪಿ ಪಂಢರಾಪುರ ನಾಸಿಕ್ ಮೊದಲಾದ ಯಾತ್ರಾಸ್ಥಳಗಳ ಮೂಲಕ ಬಂದು ಬೃಂದಾವನವನ್ನು ತಲುಪಿದರು. ಬೃಂದಾವನದ ಮಾರ್ಗದಲ್ಲಿ ಅವರ ಹರಿಗಾನವನ್ನು ಕೇಳಿದವರೆಲ್ಲಾ ಕುಣಿದಾಡುತ್ತಾ ಅವರೊಡನೆ ಸಾಗುತ್ತಿದ್ದರು. ಬೃಂದಾವನದ ಸೌಂದರ್ಯ ಅವರಿಗೆ ಮತ್ತೇರಿಸುವಂತಿತ್ತು. ಕೃಷ್ಣನ ಶ್ಯಾಮಲವರ್ಣವನ್ನು ಹೋಲುವ ನವಿಲುಗಳನ್ನು ನೋಡಿ ಉದ್ವೇಗದಿಂದ ಕುಣಿದಾಡಿ ಅಲ್ಲಿನ ಬಂಡೆಗಳನ್ನು ಬಿಗಿಯಾಗಿ ಅಪ್ಪಿಕೊಂಡು, 'ಗೋವಿಂದಾ, ಮುಕುಂದಾ! ನೀನೆಲ್ಲಿರುವೆ?' ಎಂದು ಕೂಗುತ್ತಿದ್ದರು. ಅಲ್ಲಿನ ಸರೋವರಗಳನ್ನು ನೋಡಿ ಅವುಗಳು ಕೃಷ್ಣನ ಜಲಕ್ರೀಡೆಯ ಸರೋವರಗಳೇ ಆಗಿರಬೇಕೆಂದು ನೆನೆದು ಹುಚ್ಚನಂತೆ ಹವ್ವನೆ ಹಾರಿ ಅವುಗಳಲ್ಲಿ ಬೀಳುತ್ತಿದ್ದರು. ಅನೇಕ ವೇಳೆ ಅವರ ಸಹಚರರು ಅವರನ್ನು ನೀರಿನ ಪಾಲಾಗದಂತೆ ಕಾಪಾಡಬೇಕಾಯಿತು. ರಾಧಾಕುಂಡ ಮತ್ತು ಗೋವಿಂದ ಕುಂಡಗಳಲ್ಲಿ ಸ್ನಾನ ಮಾಡಿ ಕಾಮ್ಯವನ, ಖದಿರವನ, ಶ್ರೀವನ, ಲೂಹವನ, ಮಹಾವನ ಮುಂತಾದ ಸ್ಥಳಗಳಲ್ಲೆಲ್ಲ ಸಂಭ್ರಮದಿಂದ ಓಡಾಡುತ್ತಾ ಆನಂದಪರವಶರಾದರು. ಬೃಂದಾವನದಿಂದ ಪ್ರಯಾಗ ಕಾಶಿ ಮೊದಲಾದ ಯಾತ್ರೆಗಳನ್ನು ಮುಗಿಸಿಕೊಂಡು ಪುರಿಗೆ ಹಿಂದಿರುಗಿದ ಶ್ರೀಚೈತನ್ಯರು ತಮ್ಮ ಕೊನೆಯ ೧೩-೧೪ ವರ್ಷಗಳ ವಾಸ್ತವ್ಯವನ್ನು ಈ ಕ್ಷೇತ್ರದಲ್ಲಿಯೇ ಹೂಡಿದರು.

## ಸಂನ್ಯಾಸಾಶ್ರಮದ ಆದರ್ಶ

ಚೈತನ್ಯರ ಆಧ್ಯಾತ್ಮಿಕ ಜೀವನ ಭಕ್ತಿಯ ಉತ್ಕಟ ಭಾವಾವೇಶದಲ್ಲಿ ಕೇಂದ್ರಿತವಾಗಿದ್ದುದು ನಿಜ. ಆದರೆ ಇಂಥ ಭಾವಾತ್ಮಕ ಪುರುಷರು ಸಂನ್ಯಾಸದ ಕಠೋರ ನಿಯಮಗಳನ್ನು ಅಕ್ಷರಶಃ ಪಾಲಿಸಿ ತಮ್ಮ ಜೀವನದಲ್ಲಿ ಸಂನ್ಯಾಸದ ಉದಾತ್ತ ಆದರ್ಶವನ್ನು ಎತ್ತಿಹಿಡಿದು ಇತರರಿಗೂ ಮೇಲ್ಪಂಕ್ತಿಯಾದರು. ಸ್ತ್ರೀಯರು ದೂರದಿಂದಲೇ ಅವರ ದರ್ಶನ ಪಡೆಯಬೇಕಾಗಿತ್ತು. ಚೈತನ್ಯರು ಒಂದು ಸಂದರ್ಭದಲ್ಲಿ ಹೇಳುತ್ತಾರೆ: 'ನಾನು ಜನಸಮೂಹದೊಡನೆ ಜೀವಿಸತಕ್ಕ ಸಂನ್ಯಾಸಿಯಾದುದರಿಂದ ಐಹಿಕ ವ್ಯಾಪಾರಗಳಲ್ಲಿ ನಾನು ಜಾಗರೂಕನಾಗಿರಬೇಕು. ಶುಭ್ರವಾದ ವಸ್ತ್ರದ ಮೇಲಣ ಮಸಿಯನ್ನು ಮುಚ್ಚಿಡುವುದು ಹೇಗೆ ಸುಲಭಸಾಧ್ಯವಲ್ಲವೋ, ಹಾಗೆಯೇ ಸಂನ್ಯಾಸಿಯ ಸಣ್ಣ ತಪ್ಪುಗಳೂ ಇತರರಿಗೆ ಗೋಚರಿಸುತ್ತವೆ.'

ಚೈತನ್ಯರು ತಮ್ಮ ಜೀವನದ ಕೊನೆಯ ಭಾಗವನ್ನು ಬಹುವಾಗಿ 'ದಿವ್ಯೋನ್ಮಾದ'ದಲ್ಲಿ ಕಳೆದರು. ರಾತ್ರಿಯ ವೇಳೆಯಲ್ಲಂತೂ ಅವರು ಅನೇಕ ಬಾರಿ ಸಮಾಧಿಸ್ಥಿತಿಯಲ್ಲಿರುವುದು ಸಾಮಾನ್ಯವಾಗಿತ್ತು. ಆಗ ಅವರು ತೀರ ಪರವಶರಾಗುತ್ತಿದ್ದರು. ದಿನಕಳೆದಂತೆ ಚೈತನ್ಯದೇವರ ಈ ದಿವ್ಯಭಾವವು ಹೆಚ್ಚಾಯಿತು. ಅವರ ಮನಸ್ಸಿನ ಅವಸ್ಥೆಯನ್ನು ಕುರಿತು ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: 'ಭಕ್ತಿಯ ಪರಮಾವಧಿಯನ್ನು (ಪ್ರೇಮವನ್ನು) ಮುಟ್ಟಿದ ಚೈತನ್ಯದೇವರು ತಮ್ಮನ್ನು ತಾವೇ ಮರೆಯುವಷ್ಟು ಪರಮಾತ್ಮನಲ್ಲಿ ತಲ್ಲೀನರಾಗಿದ್ದರು. ತಾವು ಹಿಂದೆ ಹೋದ ಸ್ಥಳಗಳನ್ನು ಗುರುತಿಸಲಾರದಂತೆ ಆದರು. ಯಾವುದೋ ಅರಣ್ಯವನ್ನು ಕಂಡು ಅದೇ ಬೃಂದಾವನವೆನ್ನುತ್ತಿದ್ದರು. ಸಮುದ್ರವೇ ಯಮುನಾನದಿಯ ಜಲವೆಂದು ತಿಳಿದು ಅದರೊಳಕ್ಕೆ ಬೀಳಲು ಹೋಗುತ್ತಿದ್ದರು. ಭಕ್ತನ ಅಂಥ ಪರಿಸ್ಥಿತಿಯು ಅವನನ್ನು ಪರಮಾತ್ಮನಲ್ಲಿಗೆ ಕರೆದೊಯ್ಯುತ್ತದೆ.'

ತಮ್ಮ ಕೊನೆಯ ದಿನಗಳಲ್ಲಂತೂ ಚೈತನ್ಯರು ತಮ್ಮ ಭಕ್ತಾದಿಗಳಿಂದಲೂ ಒರಿಸ್ಸಾದ ಜನಸಾಮಾನ್ಯರಿಂದಲೂ ಸ್ವತಃ ದೇವರೇ ಎಂದು ತಿಳಿಯಲ್ಪಟ್ಟಿದ್ದರು. ಅನೇಕರು ಅವರ ಪಾದೋದಕವನ್ನು ಸೇವಿಸಲು ಮುನ್ನುಗ್ಗುತ್ತಿದ್ದರು. ಇದನ್ನು ಕಂಡು ಚೈತನ್ಯರು ಜಗನ್ನಾಥ ಮಂದಿರಕ್ಕೆ ಹೋದಾಗಲೆಲ್ಲ ಜನರ ಕಣ್ಣಿಗೆ ಬೀಳದ ಹಾಗೆ ಬಚ್ಚಿಟ್ಟುಕೊಳ್ಳುತ್ತಿದ್ದರು. ದೇವಸ್ಥಾನದಲ್ಲಿ ಕದದ ಹಿಂದೆ ಒಂದು ಜಾಗವನ್ನು ಆರಿಸಿಕೊಂಡಿದ್ದರು. ಹತ್ತಿರವಿದ್ದ ಒಂದು ಬೇವಿನಮರ ಆ ಜಾಗವನ್ನು ಮರೆಮಾಡಿತ್ತು.

ತಮ್ಮ ೪೮ ನೇ ವರ್ಷದಲ್ಲಿ ಚೈತನ್ಯರಿಗೆ ತಮ್ಮ ಅಂತ್ಯ ಸಮೀಪಿಸುತ್ತಿದೆ ಎಂದು ಅನ್ನಿಸಿತು. 'ಮಾನವ ಜೀವನದ ಉದ್ದೇಶ ಭಗವಂತನಲ್ಲಿ ಶರಣಾಗುವುದು. ಸದಾ ಅವನ ನಾಮಸ್ಮರಣೆ ಮಾಡುವುದು, ಅತನನ್ನು ಪಡೆಯುವುದು' ಎಂಬ ತಮ್ಮ ಸಂದೇಶವನ್ನು ತಮ್ಮ ಕೊನೆಯುಸಿರಿರುವವರೆಗೂ ಸಾರಿದರು.

ಚೈತನ್ಯರು ಒಂದು ಸಂಘವನ್ನಾಗಲೀ, ಪಂಥವನ್ನಾಗಲೀ ಕಟ್ಟಲಿಲ್ಲ. ಅವರ ಕಠೋರ ಸಂನ್ಯಾಸಿ ಜೀವನ, ಆಧ್ಯಾತ್ಮಿಕ ವ್ಯಕ್ತಿತ್ವ ಇವುಗಳಿಂದ ಆದರ್ಶ ಭಕ್ತಿಜೀವನಕ್ಕೆ ಪ್ರೇರಿತರಾದ ಅವರ ಮುಖ್ಯ ಶಿಷ್ಯರು ನವವೈಷ್ಣವ ಪಂಥವನ್ನು ಬೆಳೆಸಿಕೊಂಡು ಬಂದರು. ಭಕ್ತಿಯೇ ಪ್ರಧಾನವಾದ ಈ ಪಂಥದಲ್ಲಿ ಜಾತಿ ಮತ ಭೇದ ಭಾವನೆಗಳಿರಲಿಲ್ಲ. ಹಿಂದುಳಿದ ಪಂಗಡಗಳವರ ಹಿತಸಾಧನೆಗಾಗಿ ದುಡಿಯುತ್ತಿದ್ದ ಅವರು ವೈಷ್ಣವ ಮತದ ಹೆಬ್ಬಾಗಿಲನ್ನು ಎಲ್ಲರಿಗೂ ತೆರೆದು ಎಲ್ಲರನ್ನೂ ಆ ಮತಕ್ಕೆ ಸೇರಿಸಿಕೊಳ್ಳುತ್ತಿದ್ದರು. ಹೀಗೆ ಶ್ರೀಕೃಷ್ಣ ಚೈತನ್ಯರು ಭಾರತದ ಆಧ್ಯಾತ್ಮಿಕ ರಂಗದಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿರುವುದನ್ನು ಕಾಣುತ್ತೇವೆ. ✡